# ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ಆಯುಕ್ತರು ಮಹಾನಗರಪಾಲಿಕೆ, ಶಿವಮೊಗ್ಗ Email:ka.shivamogga.cc@gmail.com Tel: 08182-277677

E office No:286563:SMGCC-ADM0MEST/8/2026 ದಿನಾಂಕ:05.10.2026.

## ಅಧಿಸೂಚನೆ

ಶಿವಮೊಗ್ಗ ಮಹಾನಗರಪಾಲಿಕೆಗೆ ಮಂಜೂರಾದ ಒಳಚರಂಡಿ ಸಹಾಯಕರ ಖಾಲಿ ಹುದ್ದೆಗಳನ್ನು ಹೊರಡಿಸಿರುವ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 77 ಎಂಎನ್‌ಇ 2018 (ಇ) ದಿನಾಂಕ:24.07.2026 ರಂತೆ ಹಾಗೂ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಆದೇಶ ಸಂಖ್ಯೆ: 1359725:ಡಿಎಂಎ:ಇಎಸ್‌ಟಿ:03:ಇತರೆ:53:2024 ದಿನಾಂಕ: 07.08.2026 ಮತ್ತು ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಆದೇಶ ಸಂಖ್ಯೆ: 1359725:ಡಿಎಂಎ:ಇಎಸ್‌ಟಿ:03:ಇತರೆ:53:2024 ದಿನಾಂಕ:24.08.2026 ರನ್ವಯ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 (ಕರ್ನಾಟಕ ಕಾಯ್ದೆ 1977 ರ ಸಂಖ್ಯೆ 14) ರ ಕಲಂ 421ನೇ ಉಪ ಕಲಂ 1 ರ ರೀತ್ಯಾ ಪ್ರದತ್ತವಾದ ಅಧಿಕಾರವನ್ನು ಬಳಸಿಕೊಂಡು ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ರಾಜ್ಯದ ಮಹಾನಗರಪಾಲಿಕೆಗಳ ಯುಜಿಡಿ ಹೆಲ್ಪರ್ಸ್ ಗಳ) (ವಿಶೇಷ) ನೇಮಕಾತಿ ನಿಯಮಗಳು 2026 ರ ರೀತ್ಯಾ ಮಂಜೂರಾದ ಒಳಚರಂಡಿ ಸಹಾಯಕರ ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**ಕ್ರ.ಸಂ. 01. ಹುದ್ದೆಯ ವಿವರ ಮತ್ತು ವೇತನ ಶ್ರೇಣಿ:** ಯುಜಿಡಿ ಹೆಲ್ಪರ್ಸ್ (ವೇತನ ಶ್ರೇಣಿ ರೂ.27000–46675) **ಮಂಜೂರಾದ ಯುಜಿಡಿ ಹೆಲ್ಪರ್ಸ್ ಹುದ್ದೆಗಳ ಸಂಖ್ಯೆ:** 45 **ಅರ್ಹತೆಗಳು:** 1. ಕನ್ನಡ ಮಾತನಾಡಲು ಗೊತ್ತಿರಬೇಕು. 2. ಶಿವಮೊಗ್ಗ ಮಹಾನಗರಪಾಲಿಕೆಯಲ್ಲಿ ನೇರ ಪಾವತಿ ವ್ಯವಸ್ಥೆ, ಕ್ಷೇಮಾಭಿವೃದ್ಧಿ, ದಿನಗೂಲಿ, ಗುತ್ತಿಗೆ, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಯುಜಿಡಿ ಹೆಲ್ಪರ್ಸ್ (ವೆಟ್ ವೆಲ್ / STP ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರನ್ನು ಹೊರತುಪಡಿಸಿ) ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ. 3. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮ 1977 ರ ನಿಯಮಗಳು ಅಥವಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ಅಧಿಕಾರಿ & ನೌಕರರ ನೇಮಕಾತಿ) ನಿಯಮಗಳು 2011ರ ನಿಯಮಗಳಲ್ಲಿ ಏನೇ ಒಳಗೊಂಡಿದ್ದರು, ಗರಿಷ್ಠ ವಯೋಮಿತಿ 55 ವರ್ಷಗಳನ್ನು ಮೀರತಕ್ಕದ್ದಲ್ಲ.

**ಹುದ್ದೆಗಳ ವರ್ಗೀಕರಣ :** ಶಿವಮೊಗ್ಗ ಮಹಾನಗರಪಾಲಿಕೆಗೆ ಮಂಜೂರಾದ ಯುಜಿಡಿ ಹೆಲ್ಪರ್ಸ್ – ಒಟ್ಟು ಹುದ್ದೆಗಳ ವಿವರ

**ಶಿವಮೊಗ್ಗ ಮಹಾನಗರಪಾಲಿಕೆಗೆ ಮಂಜೂರಾದ ಯುಜಿಡಿ ಹೆಲ್ಪರ್ಸ್ ಹುದ್ದೆಗಳು**
**(ರೋಸ್ಟರ್ ಬಿಂದು ಕ್ರ.ಸಂ.01 ರಿಂದ 45 ರವರೆಗೆ)**

| ಕ್ರ ಸಂ | ಮೀಸಲಾತಿ ವರ್ಗ | ಇತರೆ ಅಭ್ಯರ್ಥಿ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕರು | ಯೋಜನಾ ನಿರಾಶ್ರಿತರು | ಕನ್ನಡ ಮಾಧ್ಯಮ | ಅಂಗವಿಕಲ ಅಭ್ಯರ್ಥಿ | ತೃತೀಯ ಲಿಂಗ | ಒಟ್ಟು |
|---|---|---|---|---|---|---|---|---|---|---|
| 1 | ಪರಿಶಿಷ್ಟ ಜಾತಿ (ಪ್ರ–ಎ) | 2 | 0 | 1 | 0 | 0 | 0 | 0 | 0 | 3 |
| 2 | ಪರಿಶಿಷ್ಟ ಜಾತಿ (ಪ್ರ–ಬಿ) | 1 | 0 | 1 | 0 | 0 | 0 | 0 | 0 | 2 |
| 3 | ಪರಿಶಿಷ್ಟ ಜಾತಿ (ಪ್ರ–ಸಿ) | 0 | 1 | 1 | 0 | 0 | 0 | 0 | 0 | 2 |
| 4 | ಪರಿಶಿಷ್ಟ ಪಂಗಡ | 1 | 0 | 1 | 0 | 0 | 0 | 0 | 0 | 2 |
| 5 | ಪ್ರವರ್ಗ –1 | 1 | 1 | 0 | 0 | 0 | 0 | 0 | 0 | 2 |
| 6 | ಪ್ರವರ್ಗ –2ಎ | 2 | 2 | 2 | 0 | 1 | 0 | 0 | 0 | 7 |
| 7 | ಪ್ರವರ್ಗ–2ಬಿ | 0 | 2 | 0 | 0 | 0 | 0 | 0 | 0 | 2 |
| 8 | ಪ್ರವರ್ಗ –3ಎ | 0 | 0 | 0 | 0 | 1 | 0 | 0 | 0 | 1 |
| 9 | ಪ್ರವರ್ಗ –3ಬಿ | 0 | 0 | 1 | 0 | 0 | 0 | 0 | 1 | 2 |
| 10 | ಸಾಮಾನ್ಯ ಅಭ್ಯರ್ಥಿ | 0 | 9 | 4 | 4 | 0 | 2 | 3 | 0 | 22 |
| | **ಒಟ್ಟು** | **7** | **15** | **11** | **4** | **2** | **2** | **3** | **1** | **45** |

**ವೇತನ ಶ್ರೇಣಿ ರೂ.27000–650–29600–725–32500–800–35700–900–39300–1000–43300–1125–46675**

*) ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 08.10.2026 *) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 07.11.2026

*) ಅರ್ಜಿ ಸಲ್ಲಿಸಬೇಕಾದ ವಿಳಾಸ: ಆಯುಕ್ತರು ಶಿವಮೊಗ್ಗ ಮಹಾನಗರಪಾಲಿಕೆ, ಕಛೇರಿ, ಗಾಂಧಿಪಾರ್ಕ್ ಎದುರು ಶಿವಮೊಗ್ಗ. ಪಿನ್ ಕೋಡ್.577201.

ವಿಶೇಷ ಸೂಚನೆ: (1)ಅಧಿಸೂಚನೆಯನ್ನು ಆಯುಕ್ತರು, ಮಹಾನಗರಪಾಲಿಕೆ, ಶಿವಮೊಗ್ಗ ವೆಬ್ ಸೈಟ್ ಸೈಟ್ www.shivamoggacity.mrc.gov.in ಹಾಗೂ ಕಛೇರಿ ಸೂಚನಾ ಫಲಕದಲ್ಲಿ ವೀಕ್ಷಿಸಬಹುದು. (2) ಈ ನೇಮಕಾತಿಯು ಸರ್ಕಾರದ/ ಪೌರಾಡಳಿತ ನಿರ್ದೇಶನಾಲಯದಿಂದ ಕಾಲ ಕಾಲಕ್ಕೆ ಹೊರಡಿಸಲಾದ ಆದೇಶ/ಸುತ್ತೋಲೆ/ಅಧಿಸೂಚನೆಗಳ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ: 08182–277677.

**ಸಹಿ/–ಆಯುಕ್ತರು ಹಾಗೂ ಅಧ್ಯಕ್ಷರು, ಒಳಚರಂಡಿ ಸಹಾಯಕರ ನೇಮಕಾತಿ ಪ್ರಾಧಿಕಾರ, ಶಿವಮೊಗ್ಗ ಮಹಾನಗರ ಪಾಲಿಕೆ,ಶಿವಮೊಗ್ಗ.**

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/26–27/18/10/920